## 2018 ಕ.ತೀ.ವ 1751

### (ಕಲಬುರಗಿ ಪೀಠ)

### ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲ ಗೌಡ

### ಶ್ರೀಮತಿ ಶಕುಂತಲಾ–ವಿರುದ್ಧ– ಕರ್ನಾಟಕ ರಾಜ್ಯ, ಕಂದಾಯ ಇಲಾಖೆ ಮತ್ತು ಇತರರು*

**ಭಾರತ ಸಂವಿಧಾನ ಅನುಚ್ಛೇದ 226 ಹಾಗೂ 227 ರಡಿಯಲ್ಲಿ ರಿಟ್ ಅರ್ಜಿ.**

**ಕರ್ನಾಟಕ ಭೂ ಸುಧಾರಣಾ ಕಾಯಿದೆ 1961ರ ಕಲಂ 65.**

**ರಿಟ್ ಅರ್ಜಿದಾರರು 1961ರ ಕರ್ನಾಟಕ ಭೂ ಸುಧಾರಣಾ ಕಾಯಿದೆ ಕಲಂ 65 ರಡಿಯಲ್ಲಿ ಸಲ್ಲಿಸಿದ ಘೋಷಣೆಯ ಆಧಾರದ ಮೇಲೆ ಎದುರುದಾರರು ಆದೇಶಿಸಿ ಹೆಚ್ಚುವರಿ ಭೂಮಿಯನ್ನು ಹಿಂತಿರುಗಿಸುವಂತೆ ಆದೇಶಿಸಿದ ಕ್ರಮವನ್ನು ಪ್ರಶ್ನಿಸಿ, ಆ ಆದೇಶವನ್ನು ರದ್ದುಗೊಳಿಸುವಂತೆ ಕೋರಿ ಸಲ್ಲಿಸಿದ ಸದರಿ ರಿಟ್ ಅರ್ಜಿ.**

**ಉಭಯ ಪಕ್ಷದವರ ನಡುವೆ ನಡೆದ ಹಿಂದಿನ ನಡಾವಳಿಗಳು ತಾರ್ಕಿಕ ಅಂತ್ಯವನ್ನು ಪಡೆದಿದೆಯೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಯಲ್ಲಿ ಯಾವುದೇ ಹುರುಳಿಲ್ಲವೆಂದು ವಜಾಗೊಳಿಸಿದೆ.**

| ***ಉಲ್ಲೇಖಿಸಲಾದ ಮೊಕದ್ದಮೆಗಳು*** | ***ಪ್ಯಾರಾಗಳಲ್ಲಿ*** |
|---|---|
| *1. ಎಐಆರ್ 2010 ಕರ್ನಾಟಕ 124* | |
| *ಪುಷ್ಪಲತಾ ಎನ್.ವಿ. –ವಿರುದ್ಧ– ವಿ. ಪದ್ಮ* | *(ಉಲ್ಲೇ) 5* |
| *2. ಎಐಆರ್ 1953 ಎಸ್‌ಸಿ 65* | |
| *ಮೋಹನ್‌ಲಾಲ್ ಗೊಯಂಕ –ವಿರುದ್ಧ–* | |
| *ಬಿನಾಯ್ ಕಿಶನ್ ಮುಖರ್ಜಿ.* | *(ಉಲ್ಲೇ) 9* |

*ರಿಟ್ ಅರ್ಜಿ ಸಂ. 81480/2011(ಎಲ್‌ಆರ್–ಆರ್‌ಇಸಿ), ದಿನಾಂಕ 2ನೇ ಜನವರಿ, 2017.

*3. ಎಐಆರ್ 1960 ಎಸ್‌ಸಿ 941*
*ಸತ್ಯಧ್ಯಾನ್ ಘೋಸಾಲ್ ಮತ್ತು ಇತರರು –ವಿರುದ್ಧ–*
*ಶ್ರೀಮತಿ ದಿಯೋರಜನಿ ದೇಬಿ ಮತ್ತು ಮತ್ತೊಬ್ಬರು. (ಉಲ್ಲೇ) 11*

*4. (1999) 5 ಎಸ್‌ಸಿಸಿ 590*
*ಹೋಪ್ ಪ್ಲಾಂಟೇಷನ್ಸ್ ಲಿಮಿಟೆಡ್ –ವಿರುದ್ಧ–*
*ತಾಲೂಕ ಭೂ ಮಂಡಲಿ, ಪೀರ್‌ಮಾಡೆ. (ಉಲ್ಲೇ) 12*

*5. (2014) 5 ಎಸ್‌ಸಿಸಿ 75*
*ಡಾ॥ ಸುಬ್ರಮಣಿಯನ್ ಸ್ವಾಮಿ –ವಿರುದ್ಧ–*
*ತಮಿಳುನಾಡು ರಾಜ್ಯ (ಉಲ್ಲೇ) 13*

*6. (2016) 2 ಎಸ್‌ಸಿಸಿ 36*
*ಪ್ರಕಾಶ್ –ವಿರುದ್ಧ– ಫೂಲವತಿ. (ಉಲ್ಲೇ) 15*

ಅರ್ಜಿದಾರರ ಪರ: ಶ್ರೀ ಶಿವಕುಮಾರ್ ಕಲ್ಲೂರ್, ವಕೀಲರು,
ಪ್ರತ್ಯರ್ಜಿದಾರರ ಪರ: ಶ್ರೀ ಎ. ಸೈಯದ್ ಹಬೀಬ್, ವಕೀಲರು.

**ಆಜ್ಞೆ**

**ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲ ಗೌಡ:**

ಶ್ರೀ ಕಾಶಿನಾಥ್ ರಾವ್ ಬಿನ್ ಶ್ರೀ ಬಸ್ವಂತ್ ರಾವ್ ದೇಶ್‌ಮುಖ್ ಇವರು ಅರ್ಜಿದಾರರ ತಂದೆಯವರಾಗಿದ್ದು, ಕರ್ನಾಟಕ ಭೂಸುಧಾರಣೆ ಅಧಿನಿಯಮ, 1961ರ 65ನೇ ಪ್ರಕರಣದ ಅಡಿಯಲ್ಲಿ ಯನಗುಂಡ ಗ್ರಾಮ, ಔರಾದ್ ತಾಲೂಕು, ಬೀದರ್ ಜಿಲ್ಲೆಯಲ್ಲಿ ಭೂಹಿಡುವಳೀ ಸಂಬಂಧದಲ್ಲಿ ಉದ್ಘೋಷಣೆಯನ್ನು ದಾಖಲಿಸಿರುವರು. ವಿಚಾರಣೆ ನಡೆಸಿದ ತರುವಾಯ ಭೂ ನ್ಯಾಯಾಧಿಕರಣ, ಔರಾದ್ (ಬಿ), ದಿನಾಂಕ 29.08.1979 ರಂದು ತಾತ್ಕಾಲಿಕ ಆದೇಶವನ್ನು ಹೊರಡಿಸಿದೆ. ಅನುಬಂಧ–ಬಿ ಯ ಮೂಲಕ ದಿನಾಂಕ 14.10.1980 ರಂದು ಅಂತಿಮ ಆದೇಶವನ್ನು

ಹೊರಡಿಸಲಾಗಿದೆ ಅನುಬಂಧ–ಬಿ1 ಮೂಲಕ ಅದರಲ್ಲಿ 'ಡಿ' ದರ್ಜೆ ಭೂಮಿ 176.28 ಎಕರೆಯ ವಿಸ್ತೀರ್ಣದ ಜಮೀನು ಹೆಚ್ಚುವರಿಯಾಗಿದೆ ಎಂದು ಘೋಷಿಸಿದೆ.

2. ಇದರಿಂದ ಬಾಧಿತರಾದ ಅರ್ಜಿದಾರರ ತಂದೆ ರಿಟ್ ಅರ್ಜಿ ಸಂ.1149/1981 ಅನ್ನು ದಾಖಲಿಸಿರುವರು. ಬೀದರ್‌ನಲ್ಲಿ ಜಿಲ್ಲಾ ಭೂಸುಧಾರಣಾ ಅಪೀಲು ಪ್ರಾಧಿಕಾರವನ್ನು ರಚಿಸಲಾಗಿತ್ತು. ಸದರಿ ಪ್ರಾಧಿಕಾರಕ್ಕೆ ಮತ್ತು ನೋಂದಾಯಿತ ಅಪೀಲು ಸಂ. ಬಿಡಿಎಟಿ.ಕೆಎಲ್‌ಆರ್‌ಎ/ಡಬ್ಲ್ಯೂ38/86–87 ರಲ್ಲಿ ಅರ್ಜಿಯನ್ನು ವರ್ಗಾಯಿಸುವುದಕ್ಕೆ ದಿನಾಂಕ 02.07.1986ರಲ್ಲಿ ಆದೇಶಿಸಲಾಗಿದೆ. ಶ್ರೀ ಕಾಶಿನಾಥ್ ರಾವ್ ಅವರು ಮರಣವನ್ನಪ್ಪಿರುವರು, ಅರ್ಜಿದಾರರು ಮತ್ತು ಇತರ ಕಾನೂನು ಸಮ್ಮತ ಪ್ರತಿನಿಧಿಗಳು ಸ್ವತಃ ತಾವಾಗಿಯೇ ಕಕ್ಷಿದಾರರಾಗಿರುವರು ಮತ್ತು ಅಪೀಲು ಸಂ: ಬಿಡಿಎಟಿ.ಕೆಎಲ್‌ಆರ್‌ಎ/ಡಬ್ಲ್ಯೂ.38/86–87 ರಲ್ಲಿ ದಾವೆಯನ್ನು ಮುಂದುವರೆಸಿರುವರು. ಅಪೀಲನ್ನು ಭಾಗಶಃ ಪುರಸ್ಕರಿಸಲಾಗಿದೆ ಎಂದು ದಿನಾಂಕ 05.05.1989ರಂದು ಆದೇಶಿಸಲಾಗಿದೆ ಅನುಬಂಧ–ಸಿ ಮೂಲಕ ಅದರಲ್ಲಿ ಮೃತ ಘೋಷಕನ ಕಾನೂನು ಸಮ್ಮತ ಪ್ರತಿನಿಧಿಗಳು ಆ ಯಾವುದೇ ಭೂಮಿಯ ಹೆಚ್ಚುವರಿ ವಿಸ್ತೀರ್ಣದ ಜಮೀನಿನ 115 ಎಕರೆ ಮತ್ತು 1 ಗುಂಟೆ ಜಮೀನನ್ನು ಬಿಟ್ಟುಕೊಡಬೇಕೆಂದು ನಿರ್ಣಯಿಸಿದೆ. ನಿರ್ಣಯವನ್ನು ಭೂನ್ಯಾಯಾಧಿಕರಣ ಮತ್ತು ಸಂಬಂಧಪಟ್ಟ ಪ್ರಾಧಿಕಾರ ಪರಿವೀಕ್ಷಿಸಿ ಮತ್ತು ಕಾನೂನಿನ ಪ್ರಕಾರದಂತೆ ಮುಂದಿನ ವ್ಯವಹರಣೆಗಳನ್ನು ತೆಗೆದುಕೊಂಡಿದೆ.

3. ಇದರಿಂದ ಭಾದಿತರಾದ ಮೃತ ಕಾಶಿನಾಥ್ ರಾವ್ ಅವರ ಕಾನೂನು ಸಮ್ಮತ ಪ್ರತಿನಿಧಿಗಳು, ಅರ್ಜಿದಾರರು ಒಳಗೊಂಡಂತೆ, ಎಲ್‌ಆರ್‌ಆರ್‌ಪಿ ಸಂ.4786/1989 ಅನ್ನು ದಾಖಲಿಸಿರುವರು. ಅದರಂತೆ ಅರ್ಜಿಯನ್ನು ವಿಚಾರಣೆಗೊಳಪಡಿಸಿ ದಿನಾಂಕ 26.06.2001 ರಂದು ಅಪೀಲು ಪ್ರಾಧಿಕಾರವು ಹೊರಡಿಸಿದ ಆದೇಶವು ಯಾವುದೇ ದುರ್ಬಲತೆಯಿಂದ ಬಾಧಿತವಾಗಿಲ್ಲವೆಂದು ನಿರ್ಣಯಿಸಿದೆ. ಅರ್ಜಿಗೆ ಯಾವುದೇ ಗುಣಾರ್ಹತೆ ಇಲ್ಲವೆಂದು ತೀರ್ಮಾನಿಸಿ ಅರ್ಜಿಯನ್ನು ವಜಾಗೊಳಿಸಿದೆ. ಸದರಿ ಆದೇಶವು ಅಂತಿಮವಾದುದಾಗಿದೆ.

4. ಮೃತ ಕಾಶೀನಾಥ್ ಅವರ ಕಾನೂನು ಸಮ್ಮತ ಪ್ರತಿನಿಧಿಗಳು ಹೆಚ್ಚುವರಿ ಭೂಮಿಯ ವಿಸ್ತೀರ್ಣವನ್ನು ಬಿಟ್ಟು ಕೊಡುವುದಕ್ಕೆ ನೋಟೀಸನ್ನು ನೀಡಲಾಗಿದೆ. ಅನುಬಂಧ–ಇ ಯ ಮೂಲಕ ಭೂ ನ್ಯಾಯಾಧಿಕರಣವು ಹೊರಡಿಸಿದ ಅನುಬಂಧ–ಬಿ ಮತ್ತು ಬಿ1 ರಲ್ಲಿನ ಆದೇಶಗಳನ್ನು ವಜಾಗೊಳಿಸುವಂತೆ ಈ ರಿಟ್ ಅರ್ಜಿಯನ್ನು ದಾಖಲಿಸಿರುವರು ಮತ್ತು ಉದ್ಘೋಷಣೆಯನ್ನು ಪುನಃ ಆರಂಭಿಸುವ ವಿಷಯದಲ್ಲಿ ಭೂ ನ್ಯಾಯಾಧಿಕರಣಕ್ಕೆ ನಿರ್ದೇಶಿಸಲು ಮತ್ತು ಹಿಂದೂ ಉತ್ತರಾಧಿಕಾರ ಅಧಿನಿಯಮ, 1956ಕ್ಕೆ 2005ರ ಅಧಿನಿಯಮ ಸಂ.39 ರಲ್ಲಿ ಮಾಡಿದ ತಿದ್ದುಪಡಿ ಉಪಬಂಧಗಳನ್ನು ಈ ಮೊಕದ್ದಮೆಗೆ ಪರಿಗಣಿಸಲು ರಿಟ್ ಅರ್ಜಿಯಲ್ಲಿ ನಿವೇದಿಸಿರುವರು.

5. ಅರ್ಜಿದಾರರ ಭೂಹಿಡುವಳಿಯ ಬಗ್ಗೆ ನ್ಯಾಯವಾದಿಗಳಾದ ಶ್ರೀ ಶಿವಕುಮಾರ್ ಕಲ್ಲೂರ್, ಅರ್ಜಿದಾರರ ತಂದೆಯವರನ್ನು ಒಳಗೊಂಡಂತೆ ಅವರ ಪತ್ನಿ ಮತ್ತು ಅವಳ 5 ಜನ ಹೆಣ್ಣು ಮಕ್ಕಳನ್ನು ಭೂ ನ್ಯಾಯಾಧಿಕರಣ ಅನುಬಂಧ–ಬಿ ಮತ್ತು ಬಿ1 ರಲ್ಲಿ ಹೊರಡಿಸಿರುವ ಆದೇಶದಲ್ಲಿ ಪರಿಗಣನೆಗೆ ತೆಗೆದುಕೊಳ್ಳದಿರುವುದನ್ನು ನಿವೇದಿಸಿರುವರು. ಅವರು ಈ ಸಂಬಂಧದಲ್ಲಿ ***ಪುಷ್ಪಲತಾ ಎನ್.ವಿ. –ವಿರುದ್ಧ– ವಿ. ಪದ್ಮ*** [1] ಮೊಕದ್ದಮೆಯ ತೀರ್ಪನ್ನು ಅವಲಂಬನೆಯಾಗಿ ನಿವೇದಿಸಿರುವರು. ಈ ನ್ಯಾಯಾಲಯದ ಅರ್ಜಿದಾರರು ಮತ್ತು ಅವರ ನಾಲ್ಕು ಸಹೋದರಿಯರು ಹಿಂದು ಅವಿಭಕ್ತ ಕುಟುಂಬದಲ್ಲಿ ಜನಿಸುವ ಮೂಲಕ ಹಿಂದು ಕುಟುಂಬದ ದಾಯಾದಿಯನ್ನು ಹೊಂದಿರುವುದರಿಂದ ಹೆಣ್ಣುಮಕ್ಕಳು ಪ್ರತ್ಯೇಕ ಪಾಲನ್ನು ಹೊಂದಲು ಹಕ್ಕುಳ್ಳವರಾಗಿರುತ್ತಾರೆ ಮತ್ತು 108 ಎಕರೆ ಭೂಮಿಗಿಂತ ಹೆಚ್ಚಿನ ಭೂಮಿಯನ್ನು ಅರ್ಜಿದಾರರು ಮತ್ತು ಅವರ ನಾಲ್ಕು ಸಹೋದರಿಯರು ಪ್ರತಿಧಾರಣಮಾಡುವ ಹಕ್ಕನ್ನು ಹೊಂದಿರುವರು ಎಂದು ತೀರ್ಮಾನಿಸಬೇಕೆಂದು ನಿವೇದಿಸಿರುವರು. ಮಾನ್ಯ ನ್ಯಾಯವಾದಿಗಳು ಮುಂದುವರೆದು ಭೂನ್ಯಾಯಾಧಿಕರಣವು ಹಿಂದೂ ಉತ್ತರಾಧಿಕಾರ ಅಧಿನಿಯಮ, 1956ಕ್ಕೆ 2005ರ ಅಧಿನಿಯಮ ಸಂಖ್ಯೆ 39ರಲ್ಲಿ ಮಾಡಿದ ತಿದ್ದುಪಡಿ ಉಪಬಂಧಗಳನ್ನು ಪರಿಗಣನೆಗೆ ತಂದುಕೊಳ್ಳದೆ

1. ಎಐಆರ್ 2010 ಕರ್ನಾಟಕ 124

ಅರ್ಜಿದಾರರ ತಂದೆ ಅನುಬಂಧ-ಎ ಮಾಡಿದ ಉದ್ಘೋಷಣೆಯನ್ನು ಪರಿಗಣಿಸದೆ ಈ ಸಂಬಂಧದಲ್ಲಿ ಆದೇಶಗಳನ್ನು ಹೊರಡಿಸಿರುತ್ತಾರೆ ಆದುದರಿಂದ ಈ ಅರ್ಜಿಯನ್ನು ಪುರಸ್ಕರಿಸಬೇಕೆಂದು ನಿವೇದಿಸಿರುವರು.

6. ಮತ್ತೊಂದು ಕಡೆಯಲ್ಲಿ ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರಾದ ಶ್ರೀ ಸೈಯದ್ ಹಬೀಬ್‌ರವರು ಪೂರ್ಣನ್ಯಾಯ ತತ್ವದ ಮೂಲಕ ಅರ್ಜಿದಾರರ ಮೊಕದ್ದಮೆಯು ಪ್ರತಿಷೇಧಿತವಾಗಿದೆಯೆಂದು ನಿವೇದಿಸಿರುವರು. ಅವರು ಅರ್ಜಿದಾರರು ಮತ್ತು ಮೃತ ಕಾಶೀನಾಥ್ ರಾವ್ ಅವರ ಇತರ ಕಾನೂನು ಸಮ್ಮತ ಪ್ರತಿನಿಧಿಗಳು ಸಲ್ಲಿಸಿದ ಅಪೀಲು ಭಾಗಶಃ ಪುರಸ್ಕರಿಸಿ ಅಪೀಲು ಪ್ರಾಧಿಕಾರವು ಅನುಬಂಧ-ಬಿ ಮತ್ತು ಬಿ1 ಆದೇಶಗಳನ್ನು ವಿಲೀನಗೊಳಿಸಿ ಪ್ರಾಧಿಕಾರವು ಅನುಬಂಧ-ಸಿ ಯ ಮೂಲಕ ಆದೇಶವನ್ನು ಹೊರಡಿಸಿದೆಯೆಂದು ನ್ಯಾಯಾಲಯಕ್ಕೆ ನಿವೇದಿಸಿರುವರು ಅರ್ಜಿದಾರರು ಮತ್ತು ಇತರರು ದಾಖಲಿಸಿದ ಪರಿಷ್ಕರಣಾ ಅರ್ಜಿಯನ್ನು ಅನುಬಂಧ-ಡಿ ಯಲ್ಲಿ ಆದೇಶವನ್ನು ವಜಾಗೊಳಿಸಿರುವುದರಿಂದ ಅರ್ಜಿದಾರರ ಮೊಕದ್ದಮೆಯನ್ನು ಪೂರ್ವನ್ಯಾಯತತ್ವದ ಮೂಲಕ ಸ್ಪಷ್ಟವಾಗಿ ಪ್ರತಿಷೇದಿತವಾಗಿದೆಯೆಂಬುದನ್ನು ಆದೇಶವನ್ನು ಈ ನ್ಯಾಯಲಯದ ಗಮನಕ್ಕೆ ತಂದಿರುವರು. ಅವರು ಮುಂದುವರೆದು ಅರ್ಜಿದಾರರು ವಿಳಂಬವಾಗಿ ಮತ್ತು ಅಸಮರ್ಥನೀಯ ವಿಳಂಬವಾಗಿ ಸಲ್ಲಿಸಿರುವ ರಿಟ್ ಅರ್ಜಿ ಇದಾಗಿದೆ ಎಂದು ಸಹ ನಿವೇದಿಸಿರುವರು. ಮಾನ್ಯ ನ್ಯಾಯವಾದಿಗಳು ಅನುಬಂಧ-ಸಿ ಮತ್ತು ಡಿ ಯ ಆದೇಶಗಳು ಅನುಬಂಧ-ಇ ಯಲ್ಲಿ ನಿಷ್ಪನ್ನವಾಗಿದೆ, ಆದುದರಿಂದ ಅನುಬಂಧ-ಇ ಯಲ್ಲಿ ಯಾವುದೇ ಹೊಸ ವ್ಯಾಜ್ಯಕಾರಣವನ್ನು ಹೊಂದಿಲ್ಲವೆಂದು, ಅರ್ಜಿಯೂ ಗುಣಾರ್ಹತೆಯ ನ್ಯೂನ್ಯತೆಯನ್ನು ಹೊಂದಿದೆ ಎಂದು ಈ ನ್ಯಾಯಾಲಯಕ್ಕೆ ನಿವೇದಿಸಿರುವರು.

7. ಮೇಲೆ ನಿರೂಪಣೆಯಾದ ಸಂಗತಿಗಳು ಮತ್ತು ಪ್ರತಿಸ್ಪರ್ಧಿಗಳ ವಾದಗಳಿಂದ, ಅರ್ಜಿಯನ್ನು ಎರಡು ಪ್ರಮುಖಾಂಶಗಳಿಂದ ಪರಿಗಣಿಸಬೇಕಿದೆ ಅವೆಂದರೆ,

*(1) ಭೂ ನ್ಯಾಯಾಧಿಕರಣದ ಮುಂದೆ ಈ ಮೊಕದ್ದಮೆಯ ವ್ಯವಹರಣೆಗಳು ಪರಿಸಮಾಪ್ತಿಯಾಗುವಾಗ ಹಿಂದು ಉತ್ತರಾಧಿಕಾರ ಅಧಿನಿಯಮ, 1956ರ 6ನೇ ಪ್ರಕರಣಕ್ಕೆ 2005ರ ಅಧಿನಿಯಮ ಸಂಖ್ಯೆ 39ರ ಮೂಲಕ ಮಾಡಿದ ತಿದ್ದುಪಡಿಯು ಪರಿಣಾಮಕಾರಿಯಾಗಿದೆಯೇ, ಭೂ ನ್ಯಾಯಾಧಿಕರಣದ ಆದೇಶಗಳು ಅಪೀಲು ಪ್ರಾಧಿಕಾರದ ಆದೇಶದಲ್ಲಿ ವಿಲೀನಗೊಂಡಿರುವುದು ಮತ್ತು ಭೂಸುಧಾರಣಾ ಪರಿಷ್ಕರಣಾ ಅರ್ಜಿಯನ್ನು ವಜಾಗೊಳಿಸಲು ಅಥವಾ ಹೊಸದಾಗಿ ವಿಚಾರಣೆ ಮಾಡಲು ನಿರ್ಧರಿಸಬೇಕಾಗಿದೆಯೇ? ಮತ್ತು*

*(2) ಅರ್ಜಿದಾರರು ಮತ್ತು ಇತರರು ಅಪೀಲು ಸಂ. ಬಿಡಿಎಟಿ.ಕೆಎಲ್‌ಆರ್‌ಎ/ ಡಬ್ಲ್ಯೂ.38/86–87ರ ತೀರ್ಪಿನ ವಿರುದ್ಧ ದಾಖಲಿಸಿದ ಎಲ್‌ಆರ್‌ಆರ್‌ಪಿ ಸಂ.4786/1989 ಅನ್ನು ಪೂರ್ವನ್ಯಾಯತತ್ವದ ಅನ್ವಯ ವಜಾಗೊಳಿಸಬೇಕೆ ಮತ್ತು ಅರ್ಜಿದಾರರು ಈ ಅರ್ಜಿಯಲ್ಲಿ ಕೋರಿದ ಯಾವುದೇ ಪರಿಹಾರವನ್ನು ಅನರ್ಹಗೊಳಿಸಬೇಕೆ?*

8. ಪೂರ್ವನ್ಯಾಯ ಸಿದ್ಧಾಂತವು ಕೇವಲ ತಾಂತ್ರಿಕ ಸಿದ್ಧಾಂತ ತತ್ವವಾಗಿರುವುದಿಲ್ಲ. ಅದು ನ್ಯಾಯತತ್ವ ಮತ್ತು ಸಾರ್ವಜನಿಕ ಹಿತಾಸಕ್ತಿ ಮುಂತಾದವುಗಳನ್ನು ಆಧರಿಸಿರುತ್ತವೆ, ಯಾರೇ ಕಕ್ಷಿದಾರನನ್ನು ವ್ಯಾಜ್ಯದ ಅದೇ ವಿವಾದಾಂಶಗಳ ಮೇಲೆ ಎರಡೆರಡೂ ಸಲ ವಿಚಾರಣೆ ಮಾಡುವುದು ಸಮಸ್ಯಾತ್ಮಕವಾದುದು ಹಾಗಾಗಿ ಅದಕ್ಕೆ ಒಂದು ಅಂತಿಮತೆ ಇರತಕ್ಕದ್ದು ಯಾವುದೇ ತತ್ವಸಿದ್ಧಾಂತಕ್ಕೂ ಸಮಾನತೆ, ನ್ಯಾಯ ಮತ್ತು ಸದ್‌ವಿವೇಕದ ತತ್ವವು ಆಧಾರಿತವಾಗಿ ಮಾಡಿದ ಅಂತಿಮ ನಿರ್ಣಯ ಯಾವುದೇ ವಿಷಯದಲ್ಲಿ ಕೇವಲ ಕಾನೂನಿನ ತರುವಾಯ ಬದಲಾವಣೆಯಿಂದಾಗಿ ಅದನ್ನು ಬದಲಾಯಿಸಲು ಸಾಧ್ಯವಾಗುವುದಿಲ್ಲ.

9. ***ಮೋಹನ್‌ಲಾಲ್ ಗೊಯಂಕ –ವಿರುದ್ಧ– ಬಿನಾಯ್ ಕಿಶನ್ ಮುಖರ್ಜಿ***[2], ಮೊಕದ್ದಮೆಯಲ್ಲಿ ಪೂರ್ವನ್ಯಾಯತತ್ವವನ್ನು ಪರಿಗಣಿಸಬೇಕಾದ ಬಗೆಯನ್ನು ತಿಳಿಸಿದೆ. ಅದು ಈ ಕೆಳಗಿನಂತಿದೆ:

2. ಎಐಆರ್ 1953 ಎಸ್‌ಸಿ 65

"14 ... ನ್ಯಾಯಾಲಯದ ಒಂದು ತಪ್ಪು ನಿರ್ಣಯವು ಸರಿಯಾದ ಪಕ್ಷಕಾರರ ನಡುವೆ ಸಾಕಷ್ಟು ಬಂಧನಕಾರಿಯಂತೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುತ್ತದೆ ಮತ್ತು ನಿರ್ಣಯ ವಿರುದ್ಧ ಉನ್ನತ ನ್ಯಾಯಾಧಿಕರಣಗಳಿಗೆ ಸಲ್ಲಿಸುವ ಅಪೀಲುಗಳು ಅಥವಾ ಆ ಯಾವುದೇ ಇತರ ಅಂತಹ ಪ್ರಕ್ರಿಯೆಗಳಿಂದ ನಿರ್ಣಯವನ್ನು ಪುನರವಲೋಕಿಸುವುದನ್ನು ಕಾನೂನಿನಲ್ಲಿ ಉಪಬಂಧಿಸಿದೆ.

*****    *****    *****

23. ನಿರ್ಣಯವು ಪಕ್ಷಕಾರರ ನಡುವೆ 'ಪೂರ್ವನ್ಯಾಯ'ವನ್ನು ಕಾನೂನಿನ ನಿರ್ವಹಣೆಯ ಪ್ರಶ್ನೆಯಂತೆ ತಪ್ಪು ನಿರ್ಣಯವಾಗಿದ್ದರೂ ಆ ನಿರ್ಣಯದ ಮೇಲಿನ ಪ್ರಸ್ತಾವನೆಯನ್ನು ಪ್ರಾಧಿಕಾರಗಳು ವ್ಯಾಪಕವಾಗಿ ಮಾಡಿವೆ. ಸರಿತನ ಅಥವಾ ಅನ್ಯಥಾ ನ್ಯಾಯಿಕ ನಿರ್ಣಯವು ಅದು ಪೂರ್ವ ನ್ಯಾಯತತ್ವವು ಪ್ರತಿಷೇಧಿತವಾಗಿರುವುದಿಲ್ಲ ಅಥವಾ ಕಾರ್ಯಾಚರಣೆಗೊಳ್ಳುವುದಿಲ್ಲವೆಂಬ ಪ್ರಶ್ನೆಯಾಗಿರುತ್ತದೆ."

10. ಮೇಲಿನ ಅಭಿವ್ಯಕ್ತಿಯಲ್ಲಿ ಸರ್ವೋಚ್ಚ ನ್ಯಾಯಾಲಯವು ಕಾನೂನಿನ ಸ್ಪಷ್ಟ, ಖಚಿತ ನಿರೂಪಣೆಯನ್ನು ಮಾಡಿದೆ. ಅಪೀಲು ನ್ಯಾಯಾಲಯವು ಹೊರಡಿಸಿದ ತೀರ್ಪಾಗಿದ್ದರೆ ಮತ್ತು ಎಲ್‌ಆರ್‌ಆರ್‌ಪಿ ಸಂ.4786/1989 ರಲ್ಲಿ ಹೊರಡಿಸಿ ಆದೇಶವಾಗಿದ್ದರೂ ಸಹ ಅದನ್ನು ತಪ್ಪೆಂದೇ ಪರಿಗಣಿಸಬೇಕಾಗುತ್ತದೆ. ಇಲ್ಲಿ ಎಐಆರ್ 2010 ಕರ್ನಾಟಕ 124 ರಲ್ಲಿ ವರದಿಯಾಗಿರುವ ನಿರ್ಣಯದಲ್ಲಿ ಹೇಳಲಾದ ಕಾನೂನನ್ನು ಉಲ್ಲಂಘಿಸುವುದರೊಂದಿಗೆ ಈ ಮೊಕದ್ದಮೆಯನ್ನು ಪುನಃ ಆರಂಭಿಸುವುದಕ್ಕೆ ಸಾಧ್ಯವಾಗದು ಎಂದು ನಿರ್ದೇಶಿಸಲಾಗಿದೆ. ಆದುದರಿಂದ ದಾವೆಯನ್ನು ಅಂತಿಮವಾಗಿ ಎಲ್‌ಆರ್‌ಆರ್‌ಪಿ ಸಂ.4786/1989 ಅನ್ನು ವಜಾಗೊಳಿಸಲಾಗಿದೆ. ಅಂದರೆ ಪಕ್ಷಕಾರರ ನಡುವೆ ಪೂರ್ವನ್ಯಾಯ ತತ್ವವನ್ನು

ಕಾನೂನಿನ ಪ್ರಶ್ನೆಯ ಮೇಲೆ ಅನ್ವಯಿಸಿದ ಕಾರಣ ಅದು ತಪ್ಪಾದ ನಿರ್ಣಯವಾಗಿರುತ್ತದೆ.

11. ಹಿಂದೂ ಉತ್ತರಾಧಿಕಾರ ಅಧಿನಿಯಮಕ್ಕೆ 2005ರ ಸೆಪ್ಟೆಂಬರ್ 5 ರಂದು ಮಾಡಿದ ತಿದ್ದುಪಡಿಯ ಪರಿಣಾಮವಾಗಿ ಅದರ ಆಧಾರವಾಗಿ ಸದರಿ ಮೊಕದ್ದಮೆಯನ್ನು ಪುನಃ ಆರಂಭಿಸಲು ಸಾಧ್ಯವಾಗುವುದಿಲ್ಲ ಆದಕಾರಣ ಎಲ್‌ಆರ್‌ಆರ್‌ಪಿ ಸಂ.4786/1989ನ್ನು ಅಂತಿಮವಾಗಿ ವಜಾಗೊಳಿಸಲಾಗಿದೆ. ಸರ್ವೋಚ್ಚ ನ್ಯಾಯಾಲಯವು ***ಸತ್ಯಧ್ಯಾನ್ ಘೋಸಾಲ್ ಮತ್ತು ಇತರರು –ವಿರುದ್ಧ– ಶ್ರೀಮತಿ ದಿಯೋರಜನಿ ದೇಬಿ ಮತ್ತು ಮತ್ತೊಬ್ಬರು***[3]**,** ಮೊಕದ್ದಮೆಯಲ್ಲಿ ನೀಡಿದ ನಿರ್ಣಯವು ಹೀಗಿದೆ:

> "7. ಪೂರ್ವ ನ್ಯಾಯದ ತತ್ವಗಳು ಅಂತಿಮವಾಗಿ ನೀಡುವ ನ್ಯಾಯಿಕ ನಿರ್ಣಯಗಳು ಅಗತ್ಯತೆಯ ಮೇಲೆ ಆಧಾರಿತವಾಗಿದೆ. ಪೂರ್ವನ್ಯಾಯತತ್ವಗಳು ಒಂದು ಬಾರಿ ಮಾತ್ರ ನಿರ್ಣಯವಾಗಿರುತ್ತವೆ ಹೊರತು ಅದನ್ನು ಪದೇ ಪದೇ ನಿರ್ಣಯಮಾಡುವುದಕ್ಕೆ ಸಾಧ್ಯವಾಗತಕ್ಕದ್ದಲ್ಲ. ಪ್ರಾಥಮಿಕವಾಗಿ ಪೂರ್ವನ್ಯಾಯತತ್ವಗಳು ಹಿಂದಿನ ವ್ಯಾಜ್ಯ ಮತ್ತು ಮುಂದಿನ ವ್ಯಾಜ್ಯಗಳ ನಡುವಿರುವಂತೆ ಅನ್ವಯವಾಗುತ್ತವೆ. ಸಂಗತಿಯ ಪ್ರಶ್ನೆ ಅಥವಾ ಕಾನೂನಿನ ಪ್ರಶ್ನೆ ಮೇಲೆ ವಸ್ತುವಿಷಯ ಇರುವಾಗ ಎರಡು ಪಕ್ಷಕಾರರ ನಡುವೆ ಒಂದು ದಾವೆಯಲ್ಲಿ ಅಥವಾ ಮುಂದುವರೆದ ದಾವೆಯಲ್ಲಿ ನಿರ್ಣಯಿಸಬೇಕಾಗುತ್ತದೆ ಮತ್ತು ಅ ನಿರ್ಣಯದ ವಿರುದ್ಧ ಅಪೀಲು ಸಲ್ಲಿಸದಿರುವಾಗ ಅಥವಾ ಅಪೀಲುಗಳು ವಜಾಗೊಂಡಿರುವಾಗ ಅಥವಾ ಅಪೀಲಿಗೆ ಅವಕಾಶ ಇರದಿರುವಾಗ, ಮುಂದಿನ ದಾವೆಯನ್ನು ನಡೆಸಲು ಪಕ್ಷಕಾರರು ಇರದಿರುವಾಗ ಅಥವಾ ಅದೇ ಪಕ್ಷಕಾರರ

3. ಎಐಆರ್ 1960 ಎಸ್‌ಸಿ 941

> ನಡುವೆ ಮತ್ತೆ ಅದೇ ವಸ್ತುವಿಷಯವನ್ನು ಮುಂದುವರೆಸಲು ಕೋರಿರುವಾಗ ಪೂರ್ವನ್ಯಾಯವನ್ನು ಪ್ರಾರಂಭಿಕವಾಗಿ ಅನ್ವಯಿಸಬೇಕಾಗಿದೆ. ಪೂರ್ವನ್ಯಾಯದ ತತ್ವವನ್ನು ಸಿವಿಲ್ ಪ್ರಕ್ರಿಯಾ ಸಂಹಿತೆಯ 11ನೇ ಪ್ರಕರಣದಲ್ಲಿ ದಾವಾ ಸಂಬಂಧದಲ್ಲಿ ಅನ್ವಯಿಸಬೇಕಾದ ಬಗೆಯನ್ನು ವಿವರಿಸಲಾಗಿದೆ; ಆದರೆ 11ನೇ ಪ್ರಕರಣವು ಅನ್ವಯವಾಗದಿರುವಾಗ ಪೂರ್ವನ್ಯಾಯದ ತತ್ವವನ್ನು ನ್ಯಾಯಾಲಯಗಳೂ ವ್ಯಾಜ್ಯವನ್ನು ಅಂತಿಮವಾಗಿ ನಿರ್ಣಯಿಸುವ ಉದ್ದೇಶವನ್ನು ಸಾಧಿಸುವ ಸಲುವಾಗಿ ನ್ಯಾಯಾಲಯವು ಅದನ್ನು ಅನ್ವಯಿಸುತ್ತದೆ. ಇದರ ಪರಿಣಾಮವಾಗಿ ಮೂಲ ನ್ಯಾಯಾಲಯದಂತೆಯೇ ಯಾವುದೇ ಮೇಲಿನ ನ್ಯಾಯಾಲಯ ಸರಿತನದಿಂದ ಕೂಡಿದ ಹಿಂದಿನ ನಿರ್ಣಯದ ಆಧಾರದ ಮೇಲೆ ಯಾವುದೇ ಮುಂದಿನ ವ್ಯಾಜ್ಯಗಳನ್ನು ಮುಂದುವರೆಸಬೇಕು."
>
> (ಒತ್ತು ನೀಡಲಾಗಿದೆ)

12. ಸರ್ವೋಚ್ಚ ನ್ಯಾಯಾಲಯವು ***ಹೋಪ್ ಪ್ಲಾಂಟೇಷನ್ಸ್ ಲಿಮಿಟೆಡ್ –ವಿರುದ್ಧ– ತಾಲೂಕ ಭೂ ಮಂಡಲಿ, ಪೀರ್‌ಮಾಡೆ*** [4], ಮೊಕದ್ದಮೆಯಲ್ಲಿ ಅಂತಿಮ ತೀರ್ಪು ವ್ಯಾಪ್ತಿಯನ್ನು ವಿವರಿಸಿದೆ. ಅದು ಈ ಕೆಳಗಿನಂತಿದೆ:

> "17. .... ಸಾರ್ವಜನಿಕ ಕಾರ್ಯನೀತಿಯ ಮೇಲೆ ಸಕ್ಷಮ ಅಧಿಕಾರವ್ಯಾಪ್ತಿಯ ನ್ಯಾಯಾಲಯಗಳು ಉದ್ಘೋಷಿಸುವ ನಿರ್ಣಯಗಳು ಅಂತಿಮವಾದುದನ್ನು ಅಪೀಲು ಪ್ರಾಧಿಕಾರಗಳು ಅಥವಾ ವಿಪರ್ಯಗೊಳಿಸದ ಹೊರತು ಅದನ್ನು ಅಂತಿಮ ನಿರ್ಣಯವೆಂದು ಗಣನೀಯವಾಗಿ ಪರಿಗಣಿಸಬೇಕಾಗುತ್ತದೆ; ಮತ್ತು ಇತರೆ ತತ್ವದಲ್ಲಿ ಒಂದೇ ಬಗೆಯ ವ್ಯಾಜ್ಯದಲ್ಲಿ ಎದುರಾಗುವ ಅದೇ

4. (1999) 5 ಎಸ್‌ಸಿಸಿ 590

ಪ್ರಶ್ನೆಗಳ ಸಂಬಂಧದಲ್ಲಿ ಈಗಾಗಲೇ ಅದೇ ರೀತಿಯ ವ್ಯಾಜ್ಯಗಳಲ್ಲಿ ನೀಡಿದ ತೀರ್ಪನ್ನು ಅನ್ವಯಿಸುವುದು ಹಾಗೇನಾದರೂ ಅನ್ವಯಿಸದಿರುವ ಅಂಥ ಪ್ರಕ್ರಿಯೆಯನ್ನು ನಿಷ್ಪಕ್ಷಪಾತಕ್ಕೆ ಮತ್ತು ನ್ಯಾಯಕ್ಕೆ ವಿರುದ್ಧವಾದುದು ಎಂದು ಪರಿಗಣಿಸಬೇಕಾಗುತ್ತದೆ.

*****  *****  *****

26. ........ ಪೂರ್ವನ್ಯಾಯದ ನಿಯಮ ಪಕ್ಷಕಾರರು ವ್ಯಾಜ್ಯಗಳ ನ್ಯಾಯಿಕ ನಿರ್ಣಯುಗಳಿಂದ ಅದೇ ಪ್ರಶ್ನೆಗಳನ್ನು ತಪ್ಪಾಗಿ ನಿರೂಪಣೆಗೊಂಡಿದ್ದರೂ ಅದೇ ನಿರ್ಣಯುವು ಅದಕ್ಕೆ ಅನ್ವಯವಾಗುತ್ತದೆ. ವ್ಯವಹರಣೆಗಳು ಅಂತಿಮ ಹಂತದಲ್ಲಿ ಇರುವಾಗ, ಪಕ್ಷಕಾರರು ತೀರ್ಪಿನಲ್ಲಿರುವುದನ್ನು ಪ್ರಶ್ನೆ ಮಾಡುವುದು ಸ್ವಯಂಕೃತ ನಿರ್ಬಂಧವಾಗಿರುತ್ತವೆ.''

13. ಸರ್ವೋಚ್ಚ ನ್ಯಾಯಾಲಯ ***ಡಾ॥ ಸುಬ್ರಮಣಿಯನ್ ಸ್ವಾಮಿ –ವಿರುದ್ಧ– ತಮಿಳುನಾಡು ರಾಜ್ಯ***[5], ಮೊಕದ್ದಮೆಯಲ್ಲಿ ನೀಡಿದ ತೀರ್ಪು ಹೀಗಿದೆ:

''48. ವಾಸ್ತವವಾಗಿ ಅನ್ಯಥಾ, ಕಾನೂನಿನ ಅರ್ಥವಿವರಣೆಯ ಮೇಲೆ ವಿವಿಧ ಅಭಿಪ್ರಾಯಗಳು ವ್ಯಕ್ತವಾಗಬಹುದು ಆದರೆ ಮೊಕದ್ದಮೆಯಲ್ಲಿ ಅದನ್ನು ಸ್ವೀಕರಿಸಲು ಸಾಧ್ಯವಾಗುವುದಿಲ್ಲ ಅದೇ ರೀತಿಯ ವ್ಯವಹರಣೆಗಳ ಸಂಬಂಧದಲ್ಲಿ ನೀಡಿದ ನಿರ್ಣಯಗಳನ್ನು ಆಧಾರವಾಗಿಟ್ಟುಕೊಂಡು ವ್ಯವಹರಣೆಗಳನ್ನು ಇತ್ಯರ್ಥಪಡಿಸಲು ಸಾಧ್ಯವಾಗದಿರುವ ಪರಿಣಾಮವಾಗಿ, ಅಂಥ ವ್ಯಾಜ್ಯಗಳನ್ನು ಹಿಂದಿನ ವ್ಯಾಜ್ಯವನ್ನು ಮತ್ತೆ ಆರಂಭಿಸುವುದು ಮತ್ತು ವ್ಯವಹರಣೆಗಳನ್ನು

5. (2014) 5 ಎಸ್‌ಸಿಸಿ 75

> ಮುಕ್ತಾಯಗೊಳಿಸುವುದು ಅಥವಾ ಹಕ್ಕುಗಳನ್ನು ಇತ್ಯರ್ಥಪಡಿಸುವುದು ಅಪಾಯಕ್ಕೆ ಒಳಪಡಿಸಿದಂತೆ ಆಗುತ್ತದೆ ಮತ್ತು ಅದು ಸಮಾಜದಲ್ಲಿ ಅವ್ಯವಸ್ಥೆಯ ಸ್ಥಿತಿಗಳು ಮತ್ತು ಅಸ್ಥಿರತೆಯ ಸನ್ನಿವೇಶಗಳು ಉಂಟಾಗುತ್ತವೆ. ಆದುದರಿಂದ ಈಗಾಗಲೇ ಆ ವಿಷಯದಲ್ಲಿ ನೀಡಿದ ತೀರ್ಪುಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತವೆ."

14. ಈ ಮುಂಚಿನ ವ್ಯವಹರಣೆಗಳನ್ನು ಅದೇ ಅಧಿನಿಯಮದ ಅಡಿಯಲ್ಲಿ ವಿವಾದಾಂಶಗಳು, ತಮ್ಮೊಳಗಿನ ವಸ್ತುವಿಷಯಗಳು ಅಂಥ ವಸ್ತುವಿಷಯಗಳು ಇದ್ದಲ್ಲಿ ಯಾರೇ ಪಕ್ಷಕಾರರಿಗೆ ಅದನ್ನು ಎತ್ತುವುದಕ್ಕೆ ಅನುಮತಿಯನ್ನು ಅನುಮತಿಸಲಾಗುವುದಿಲ್ಲ. ಪೂರ್ವನ್ಯಾಯದ ಸಿದ್ಧಾಂತದಲ್ಲಿ ಖಚಿತವಾದ ಅರ್ಥವನ್ನು ಅನ್ವಯವಾಗದಿದ್ದಾಗ್ಯೂ. ಅದರ ತತ್ವಗಳನ್ನು ಅನ್ವಯಿಸಿಕೊಳ್ಳಬಹುದಾಗಿದೆ. ಅರ್ಜಿದಾರರು, ಪರಿಹಾರೋಪಾಯವನ್ನು ಮತ್ತು ಅಪೀಲನ್ನು ಎರಡನ್ನೂ ಕೋರಿರುವುದು ಮತ್ತು ಪರಿಷ್ಕರಣಾ ಅರ್ಜಿ ಸಲ್ಲಿಸಿರುವುದು ಮೇಲಿನ ಮೊಕದ್ದಮೆಯಲ್ಲಿ ಕಂಡುಬರುತ್ತದೆ. ಸಿ ಮತ್ತು ಡಿ ಅನುಬಂಧದಲ್ಲಿರುವ ಅದೇಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಅರ್ಜಿದಾರರು ಸ್ವಯಂ ನಿರ್ಬಂದ ಮತ್ತು ಪೂರ್ವನ್ಯಾಯದ ಎರಡು ತತ್ವಗಳ ಮೇಲೆ ಮೊಕದ್ದಮೆಯನ್ನು ಪುನರ್ ವಿಚಾರಣೆಗೆ ಕೋರಲು ಸಾಧ್ಯವಾಗುವುದಿಲ್ಲ.

15. ಸರ್ವೋಚ್ಚ ನ್ಯಾಯಾಲಯವು ***ಪ್ರಕಾಶ್ -ವಿರುದ್ಧ- ಫೂಲವತಿ***[6], ಮೊಕದ್ದಮೆಯಲ್ಲಿ ಹಿಂದೂ ಉತ್ತರಾಧಿಕಾರ ಅಧಿನಿಯಮ, 1956ರ 6ನೇ ಪ್ರಕರಣವನ್ನು 2005ರ ಅಧಿನಿಯಮ ಸಂ.39 ರಲ್ಲಿ ಹಿಂದೂ ಉತ್ತರಾಧಿಕಾರ (ತಿದ್ದುಪಡಿ) ಅಧಿನಿಯಮದಲ್ಲಿ ಪ್ರತ್ಯಾಯೋಜಿಸಲಾಗಿದೆ, ತಿದ್ದುಪಡಿ ಉಪಬಂಧವು ಪೂರ್ವಾನ್ವಯವಾಗಿ ಪರಿಣಾಮಕಾರಿಯಾಗುವುದಕ್ಕೆ ವ್ಯಕ್ತವಾಗಿ ಉಪಬಂಧಿಸಿರುವುದಿಲ್ಲ

6. (2016) 2 ಎಸ್‌ಸಿಸಿ 36

ಪೂರ್ವಾನ್ವಯವಾಗಿ ಪರಿಣಾಮಕಾರಿಯಾಗುವುದನ್ನು ಅವಶ್ಯವಾಗಿ ಉದ್ದೇಶಿಸಿರುವುದಿಲ್ಲ. ತಿದ್ದುಪಡಿಗಳನ್ನು ಪೂರ್ವಾನ್ವಯವಾಗಿ ಓದಿಕೊಂಡರೆ ಸಾಮಾಜಿಕ ಶಾಸನವನ್ನು ತುಂಡರಿಸಿದಂತೆ ಆಗುವುದರಿಂದ ಪೂರ್ವಾನ್ವಯವಾಗಿ ಅನ್ವಯಿಸಿಕೊಳ್ಳುವುದನ್ನು ಸ್ವೀಕರಿಸಲು ಸಾಧ್ಯವಾಗುವುದಿಲ್ಲ.

16. ಇದು ಕಾನೂನಿನಲ್ಲಿ ಸುಸ್ಥಾಪಿತವಾದ ಸ್ಥಿತಿಯಾಗಿರುವ ದೃಷ್ಟಿಯಿಂದ ಮತ್ತು ಪಕ್ಷಕಾರರ ನಡುವೆ ಈಗಾಗಲೇ ಮುಕ್ತಾಯವಾದ ವ್ಯವಹರಣೆಗಳಾಗಿದ್ದವು ಎಂಬುದನ್ನು ಮೇಲಿನ ಮೊಕದ್ದಮೆಯಲ್ಲಿ ಗಮನಕ್ಕೆ ತಂದುಕೊಳ್ಳಲಾಗಿದೆ. ಮೊಕದ್ದಮೆಯಲ್ಲಿ ಈಗಾಗಲೇ ಅಂತಿಮ ನ್ಯಾಯತೀರ್ಪನ್ನು ಪಡೆದುಕೊಂಡಿದೆ. ಆದುದರಿಂದಲೇ ಶ್ರೀ ಶಿವಕುಮಾರ್ ಕಲ್ಲೂರ್ ಮಂಡಿಸಿದ ವಾದದಲ್ಲಿ ಯಾವುದೇ ಗುಣಾರ್ಹತೆ ಇರುವುದಿಲ್ಲ.

ತದನುಸಾರವಾಗಿ, ಅರ್ಜಿಯು ಗುಣಾರ್ಹತೆ ರಹಿತವಾಗಿರುವುದರಿಂದ ಅದನ್ನು ವಜಾಗೊಳಿಸಲಾಗಿದೆ ವೆಚ್ಚಗಳಿಗೆ ಯಾವುದೇ ಆದೇಶ ಇರುವುದಿಲ್ಲ.

---